ಬೆಂಗಳೂರು ಷಹರ್ ಮ್ಯುನಿಸಿಪ್ಯಾಲಿಟ್ಟಿ.

ಸರಟಿಫಿಕೇಟ್.

ನಂ. 608.

ತಾರೀಖು 10ನೇ ಮಾರ್ಚಿ 1885.

ಇದರಿಂದ ಸರಟಿಫೈ ಮಾಡುವದೇನಂದರೆ, ವೀತಾರಾಮಯ್ಯನ,ಕೊಳದ ಸಮೀಪದಲ್ಲಿಯೂ ಮೈಸೂರು ಸ್ಟೇಟ್ ರೈಲ್ವೆ ಇಲಾಖಾ ಸ್ಟಾಫ್‌ಕ್ವಾರಟರಿನ ಬಾಜೂದಲ್ಲಿಯೂ ಇರುವ ಹಾಲಿ ಸ್ಮಶಾನಘಟ್ಟನ್ನು ಈಗಿನಂತೆಯೆ ಉಳಿಸಲ್ಪಟ್ಟರೆ ಅದರ ಆಜೂಬಾಜೂದಲ್ಲಿನ ನಿವಾಸಸ್ಥರ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡತಕ್ಕಂಥಾ ಸ್ಥಿತಿಯಲ್ಲಿರುವದರಿಂದ ಹಾಲಿ ಇರತಕ್ಕ ಸ್ಮಶಾನಘಟ್ಟದಿಂದ ಆಚಿಗೆ ಸ್ವಲ್ಪದೂರದಲ್ಲಿಯೇ ಮುರದೆಗಳ ದರ್ಗಾ ಮತ್ತು ಸುಡುವ ಬಯ್ಲೆ ಈಗಿರುವದಕ್ಕೆ ಬದಲಾಗಿ ಬೇರೆ ಸ್ಮಶಾನಘಟ್ಟನ್ನು ನಿಯಮಿಸಲ್ಪಟ್ಟಿರುತ್ತೆ. ಇದರಿಂದ ಯಚ್ಚರಿಸುವದೇನಂದರೆ, ಈ ಸರ್ಟಿಫಿಕೇಟ್ ತಾರೀಖು ನೊದಲು ಯಾರಹುತಿಂಗಳು ಕಳೆದ ತರುವಾಯ ಯಾವ ಮನುಷ್ಯನೇ ಆಗಲೀ ಸದರೀ ವೀತಾರಾಮಯ್ಯನ ಕೊಳದ ಸಮೀಪದಲ್ಲಿಯೂ ರೈಲ್ವೇ ಸ್ಟಾಫ್‌ಕ್ವಾರಟರಿನ ಬಾಜೂವಲ್ಲಿಯೂ ಯಿರತಕ್ಕ ಮೇಲೆ ಕಂಡ ಸ್ಮಶಾನಘಟ್ಟದಲ್ಲಿ ಯಾವ ಹೆಣವನ್ನಾದರು ಸುಟ್ಟ್ಯಾಗ್ಯೂ ಹೂಡಾಗ್ಯೂ ಅಂಥಾ ಪ್ರತೀ ಮನುಷ್ಯನೂ 1871ನೇ ಇಸವಿ ಬೆಂಗಳೂರು ಮ್ಯುನಿಸಿಪಲ್ ರಗ್ಯುಲೇಷನಿನ 190ನೇ ಸೆಕ್ಷನಿನಲ್ಲಿ ವಿಧಿಸಲಟ್ಟ ದಂಡಕ್ಕೆಗೆ ಗುರಿಯಾಗತಕ್ಕದ್ದು.

ಯೆ. ಶ್ರೀನಿವಾಸಾಚಾರ್,
ವೈಸ್ ಪ್ರೆಸಿಡೆಂಟ್, ಷಹರ್ ಮ್ಯುನಿಸಿಪಲ್ ಕಮ್ಮಿಷರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿ|| ಸಬ್‌ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 134.

ಮೃತಪಟ್ಟ ಮಲ್ಲಾಮೇಸ್ತ್ರಿರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಚಿತ್ರದುರ್ಗ ತಾಲ್ಲೂಕು ಗಾರೆಹಟ್ಟಿ ಮುರಿಗೆಪ್ಪ, ಮೃತಪಟ್ಟ ಸದರೀ ಮಲ್ಲಾ ಮಲ್ಲಾಮೇಸ್ತ್ರೀರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿತ್ರದುರ್ಗ ತಾಲ್ಲೂಕು ಗಾರೆಹಟ್ಟಿ ಸ್ಥಳದ ಮುರಿಗೆಪ್ಪನವರು ಸದರೀ ಗಾರೆಹಟ್ಟಿ ವಾಸಸ್ಥರಾಗಿ ಮೃತಪಟ್ಟ ಮಲ್ಲಾಮೇಸ್ತ್ರಿರ ಜಿಂದಗಿ ಬ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಯ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುರಿಗೆಪ್ಪನವರ ಅರ್ಜೀಯನ್ನು 1885ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಾಮೇಸ್ತ್ರಿರ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಏಪ್ರೆಲ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕೈಸ್,
ಸಬ್‌ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 92.

ಮೃತಪಟ್ಟ ಅಂಡರ್ ಸೆಕ್ರಟೇರಿ ಮೆ|| ಶ್ರೀನಿವಾಸಯ್ಯಂಗಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ಸ್ಟೇಟ್‌ರೈಲ್ವೆ ಅಸಿಸ್ಟೆಂಟ್ ಇಂಜನಿಯರ್ ಮೆ|| ಗೋವಿಂದಾಚಾರಲು, ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ಸ್ಥಳದ ಸದರೀ ಗೋವಿಂದಾಚಾರಲು ಯವರು ಬೆಂಗಳೂರು